ಅಧ್ಯಕ್ಷರು : ಪ್ರಸ್ತಾವ ಏನೆಂದರೆ : "1991ನೇ ಇಸವಿಯ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯೆ ವಿಧೇಯಕ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸಲು 1994ರ ಅಕ್ಟೋಬರ್ ಅಂತ್ಯದವರೆಗೆ ಕಾಲಾವಕಾಶವನ್ನು ನೀಡುವುದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಮೇಲ್ಕಂಡ ಸಮಿತಿಗೆ ವರದಿ ಒಪ್ಪಿಸಲು ಅಕ್ಟೋಬರ್ ಅಂತ್ಯದವರೆಗೆ ಕಾಲಾವಕಾಶ ನೀಡಲಾಯಿತು).

ಪ್ರಕಟಣೆ

ವಿಷಯ : ಕಾರ್ಯಕಲಾಪಗಳ ಸಲಹಾ ಸಮಿತಿಯ ನಿರ್ಧಾರಗಳು

ವಿಧಾನಸಭಾ ಕಾರ್ಯಕಲಾಪಗಳ ಸಲಹಾ ಸಮಿತಿಯು ಇಂದು ದಿನಾಂಕ 01-09-94ರಂದು 5-00 ಗಂಟೆಗೆ ಸಭೆ ಸೇರಿ ಈ ಕೆಳಕಂಡ ಕಾರ್ಯಕಲಾಪಗಳನ್ನು ಕೈಗೊಳ್ಳಬೇಕಾಗಿ ತೀರ್ಮಾನಿಸಿತು.

ಶುಕ್ರವಾರ ದಿನಾಂಕ : 02-9-94 ರಂದು ಬೆಳಿಗ್ಗೆ 11-00ಗಂಟೆಗೆ.	:	ಪ್ರಶ್ನೋತ್ತರಗಳು, ಗಮನ ಸೆಳೆಯುವ ಬೇಡಿಕೆಯ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು, ವಿಧೇಯಕಗಳ ಮಂಡನೆ, ಚರ್ಚೆ ಹಾಗೂ ಮತಕ್ಕೆ ಹಾಕುವುದು.
ಶನಿವಾರ ದಿನಾಂಕ 03-9-94 ರಂದು ಬೆಳಿಗ್ಗೆ 11-00 ಗಂಟೆಗೆ	:	ಗಮನಸೆಳೆಯುವ ಸೂಚನೆಗಳು, ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು. ವಿಧೇಯಕಗಳ ಮಂಡನೆ, ಚರ್ಚೆ ಹಾಗೂ ಮತಕ್ಕೆ ಹಾಕುವುದು.
ಭಾನುವಾರ ದಿನಾಂಕ 04-9-94		ರಜಾ ದಿನ
ಸೋಮವಾರ ದಿನಾಂಕ : 05-9-94 ಬೆಳಿಗ್ಗೆ 11-00 ಗಂಟೆಗೆ	:	ಪ್ರಶ್ನೋತ್ತರಗಳು, ಗಮನ ಸೆಳೆಯುವ ಸೂಚನೆಗಳು, ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು. 19949-5ನೇ ಸಾಲಿನ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು. 1994-95ನೇ ಸಾಲಿನ ಅನುಪೂರಕ ಅಂದಾಜುಗಳ (ಮೊದಲನೇ ಕಂತು) ಚರ್ಚೆ ಹಾಗೂ ಮತಕ್ಕೆ ಹಾಕುವುದು. 1994-95ನೇ ಸಾಲಿನ ಅನುದಾನಗಳ ಬೇಡಿಕೆಗಳಿಗೆ ಸಂಬಂಧಿಸಿದಂತೆ ಧನ ವಿನಿಯೋಗ ವಿಧೇಯಕ ಮಂಡನೆ ಪರ್ಯಾಲೋಚನೆ ಹಾಗೂ ಅಂಗೀಕರಿಸುವುದು. 1994-95ನೇ ಸಾಲಿನ ಅನುಪೂರಕ ಅಂದಾಜುಗಳ (ಮೊದಲನೇ ಕಂತು) ಸಂಬಂಧಿಸಿದಂತೆ ವಿಧೇಯಕ ಮಂಡನೆ

ಹಾಗೂ ಪರ್ಯಾಲೋಚನೆ ಮತ್ತು ಅಂಗೀಕರಿಸುವುದು.

ಮಂಗಳವಾರ ದಿನಾಂಕ : 06-9-94
ಬುಧವಾರ ದಿನಾಂಕ : 07-09-94
ಬೆಳಿಗ್ಗೆ 09-30 ಗಂಟೆಗೆ

ಶಾಸಕರ ದಿನಾಚರಣೆ ಗಮನ ಸೆಳೆಯುವ ಸೂಚನೆಗಳು, ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಹಾಗೂ ಅಂಗೀಕರಿಸುವುದು.

1994-95ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಮಹತ್ವದ ಚರ್ಚೆಯನ್ನು ತೆಗೆದುಕೊಳ್ಳಬೇಕಾದ ಕಾರಣ ದಿನಾಂಕ : 02-09-94ರಂದು ಖಾಸಗಿ ಸದಸ್ಯರ ಕಾರ್ಯಕಲಾಪಗಳನ್ನು ಕೈಗೊಳ್ಳಬಾರದಾಗಿ ಸಭೆಯು ತೀರ್ಮಾನಿಸಿತು.

ಕಾರ್ಯಕಲಾಪಗಳ ಸಲಹಾ ಸಮಿತಿಯ ಶಿಫಾರಸ್ಸುಗಳನ್ನು ಈ ಸದನವು ಒಪ್ಪಿದೆ ಎಂದು ಭಾವಿಸುತ್ತೇನೆ.

(ಸಭೆ ಮತ್ತೆ ನಾಳೆ ಬೆಳಿಗ್ಗೆ 11-00ಗಂಟೆಗೆ ಸೇರುವುದು)

(ಸದನವು ಸಂಜೆ 7.35ಕ್ಕೆ ಕೊನೆಗೊಂಡು ಮತ್ತೆ ದಿನಾಂಕ 2-9-94ರಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ತೀರ್ಮಾನಿಸಿತು)